**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.211/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀರವಿ | ಪ್ರಾಸಾ-4 |
| ತಂದೆಯ ಹೆಸರು | : ರಂಗಪ್ಪ | ಚಾಸಾ-12 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ 15.07.2025. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ಜನವರಿ 2024 ಇಲ್ಲಿಯವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.24.10.2024 ರಂದು ಠಾಣೆಯ SHO ಕರ್ತವ್ಯದಲ್ಲಿ ನಿರತನಾಗಿದ್ದಾಗ ರಾ.18.30 ರ ಸಮಯಕ್ಕೆ ಚಾಸಾ-4 ರವರ ಮುಖೇನ ಚಾಸಾ-1 ರವರು ಪ್ರಕರಣವನ್ನು ದಾಖಲಿಸಲು ವರದಿಯನ್ನು ಕಳುಹಿಸಿರುತ್ತಾರೆ. ನಂತರ ಪ್ರಕರಣವನುನ ಓದಿ ಠಾ.ಮೊ.ನಂ.67/2024 ರಲ್ಲಿ ಕಲಂ 32 ಮತ್ತು 34 ರ KE ಕಾಯ್ದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಘನ ನ್ಯಾಯಾಲಯಕ್ಕೆ 19.00 ರ ಸಮಯಕ್ಕೆ ಚಾಸಾ-9 ರವರು ಮುಖೇನ ನಿವೇದಿಸಿಕೊಂಡಿರುತ್ತೇನೆ.

ನಂತರ ಘಟನಾ ಸ್ಥಳದಲ್ಲಿ ಹಾಜರಿದ್ದ ಚಾಸಾ-1 ರವರಿಗೆ ಪ್ರ.ವ.ವ ಯ ಮಾಹಿತಿಯನ್ನು ನೀಡಿರುತ್ತೇನೆ. ನಂತರ ಪ್ರಕರಣದ ಹೆಚ್ಚಿನ ತಿನಿಖೆಗಾಗಿ ಕಡತವನ್ನು ಚಾಸಾ-1 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ದಿ.24.10.2024 ರಂದು ನೀಡಿದ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಬಾಬ್ತು ದಾಖಲಿಸಿದ ಪ್ರ.ವ.ವ ಯನ್ನು ನಿಪಿ-6, ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಹೆಚ್. ವಕೀಲರಿಂದಃ**

ದಿ.24.10.2024 ರಂದು ಠಾಣೆಯ SHO ಕರ್ತವ್ಯದಲ್ಲಿ ನಿರತನಾಗಿದ್ದಾಗ ರಾ.18.30 ರ ಸಮಯಕ್ಕೆ ಚಾಸಾ-4 ರವರ ಮುಖೇನ ಚಾಸಾ-1 ರವರು ಪ್ರಕರಣವನ್ನು ದಾಖಲಿಸಲು ವರದಿಯನ್ನು ಕಳುಹಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪ್ರಕರಣವನುನ ಓದಿ ಠಾ.ಮೊ.ನಂ.67/2024 ರಲ್ಲಿ ಕಲಂ 32 ಮತ್ತು 34 ರ KE ಕಾಯ್ದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಘನ ನ್ಯಾಯಾಲಯಕ್ಕೆ ಈ ಪ್ರಕರಣಕ್ಕೆ ಕುರಿತಂತೆ ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಘಟನಾ ಸ್ಥಳದಲ್ಲಿ ಹಾಜರಿದ್ದ ಚಾಸಾ-

1 ರವರಿಗೆ ಪ್ರ.ವ.ವ ಯ ಮಾಹಿತಿಯನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.